# ಸರ್ಕಾರಿ ಪ್ರೌಢಶಾಲೆ ಇಂಡಿ. ತಾ: ಇಂಡಿ, ಜಿ: ವಿಜಯಪುರ

## 10ನೇ ತರಗತಿ ಮಧ್ಯವಾರ್ಷಿಕ ಪರೀಕ್ಷೆ ಸೆಪ್ಟೆಂಬರ್ 2022

**ವಿಷಯ: ಸಮಾಜ ವಿಜ್ಞಾನ** **ದಿನಾಂಕ:**

**ಅಂಕಗಳು: 80** **ಸಮಯ: 3ಗಂಟೆ**

---

**I.ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರ ಆರಿಸಿ ಬರೆಯಿರಿ** 8 x1=8

1. ಮೊದಲನೆಯ ಆಂಗ್ಲೋ ಮರಾಠಾ ಯುದ್ಧವು ಈ ಒಪ್ಪಂದದಿಂದ ಕೊನೆಗೊಂಡಿತು.
   ಎ) ಬೇಸ್ಸಿನ್ ಬಿ) ಸಾಲ್ಬಾಯ್ ಸಿ) ಲಾಹೋರ್ ಡಿ) ಮಂಗಳೂರು
2. ಈ ವರದಿಯು ಬ್ರಿಟಿಷರ ಅವಧಿಯಲ್ಲಿ ಭಾರತದಲ್ಲಿ ಶಿಕ್ಷಣ ಸಾರ್ವತ್ರಿಕರಣಕ್ಕೆ ಸಹಾಯಕವಾಯಿತು.
   ಎ) ಚಾರ್ಲ್ಸ್‌ವುಡ್ ಬಿ) ವಾರನ್‌ಹೆಸ್ಟಿಂಗ್ಸ್ ಸಿ) ಜೊನಾಥನ್ ಡಂಕನ್ ಡಿ) ಮೆಕಾಲೆ
3. ಕರ್ನಾಟಕ ಸರ್ಕಾರವು ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ ರೂಪಿಸಿರುವ ಕಾರ್ಯಕ್ರಮ____
   ಎ) ವಿದ್ಯಾಸಿರ ಬಿ) ಗ್ರಾಮೀಣ ಸಡಕ್ ಯೋಜನೆ ಸಿ) ಸ್ತ್ರೀಶಕ್ತಿ ಡಿ) ಯಶಸ್ವಿನಿ
4. ಮಾನವ ಕುಲಂ ತಾನೊಂದೆ ವಲಂ ಎಂದ ಕವಿ ಯಾರು?
   ಎ) ಪಂಪ ಬಿ) ರನ್ನ ಸಿ) ಕುವೆಂಪು ಡಿ) ಜನ್ನ
5. ನೀವು ನಿಮ್ಮ ಸಂತೋಷಕ್ಕಾಗಿ ಬಿಡಿಸುವ ಚಿತ್ರವು
   ಎ) ಶ್ರಮ ವಿಭಜನೆ ಬಿ) ಸಂಭಾವನೆ ಸಹಿತ ದುಡಿಮೆ
   ಸಿ) ಸಂಭಾವನೆ ರಹಿತ ದುಡಿಮೆ ಡಿ) ಸಂಘಟಿತ ದುಡಿಮೆ
6. ಭಾರತದಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿರುವ ಸ್ಥಳ.
   ಎ) ಉತ್ತರ ಜಾಸ್ಕರ್ ಶ್ರೇಣಿ ಬಿ) ರಾಜಸ್ತಾನದ ರೂಯ್ಲಿ ಸಿ) ರಾಜಸ್ತಾನದ ಗಂಗಾನಗರ ಡಿ) ಕಾರಾಕೋರಂ ಶ್ರೇಣಿ
7. ಭಾರತದ ಆರ್ಥಿಕ ಯೋಜನೆಯ ಪಿತಾಮಹ
   ಎ) ಡಾ. ಅಂಬೇಡ್ಕರ್ ಬಿ) ಜವಾಹರಲಾಲ್ ನೆಹರು ಸಿ) ಸರ್.ಎಂ. ವಿಶೇಶ್ವರಯ್ಯ ಡಿ) ಡಾ.ರಾಜೇಂದ್ರ ಪ್ರಸಾದ
8. ಸಾಮಾನ್ಯವಾಗಿ ಉದ್ಯಮಿಗಳು ಮತ್ತು ವ್ಯಾಪಾರಸ್ಥರು ಈ ಖಾತೆಯನ್ನು ತೆರೆಯುತ್ತಾರೆ .
   ಎ) ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ ಸಿ) ಆವರ್ತ ಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

**II.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.** **8x1=8**

9. ನೀಲಿ ನೀರಿನ ನೀತಿ ಎಂದರೇನು?
10. ಸ್ವಾಮಿ ವಿವೇಕಾನಂದರು ರಾಮಕಷ್ಣ ಮಠ ಸ್ಥಾಪಿಸಿದರ ಉದ್ದೇಶವೇನು?
11. 1962 ರಲ್ಲಿ ಯಾವ ದೇಶವು ಭಾರತದ ಮೇಲೆ ಆಕ್ರಮಣ ಮಾಡಿತು?
12. ಪೂರ್ವಾಗ್ರಹ ಎಂದರೇನು?
13. ಭಾರತಕ್ಕೆ ಇಂಡಿಯಾ ಎಂಬ ಹೆಸರು ಹೇಗೆ ಬಂತು?
14. ಕಪ್ಪು ಮಣ್ಣು ಹೇಗೆ ಉತ್ಪತ್ತಿಯಾಗಿದೆ?
15. ಹಸಿರು ಕ್ರಾಂತಿ ಎಂದರೇನು?
16. ಒಂದು ದಿನಕ್ಕೆ ಎಷ್ಟು ಬಾರಿಯಾದರೂ ಹಣಕಾಸಿನ ವ್ಯವಹಾರ ಮಾಡಬಹುದಾದ ಖಾತೆ ಯಾವುದು?

**III.ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತಿರಿಸಿ.** **8x2=16**

17. ಸಹಾಯಕ ಸೈನ್ಯ ಪದ್ಧತಿಯು ಭಾರತೀಯ ರಾಜರನ್ನು ಹೇಗೆ ನಿಯಂತ್ರಿಸಿತ್ತು?
18. ಹೊಸ ಜಲಮಾರ್ಗದ ಅನ್ವೇಷಣೆಗೆ ಯೂರೋಪಿಯನ್ನರಿಗೆ ಸಹಾಯಕವಾದ ಅಂಶಗಳಾವವು?
19. ಬಡತನ ನಿರ್ಮೂಲನೆಗೆ ಸರ್ಕಾರ ಜಾರಿಗೊಳಿಸಿರುವ ಕಾರ್ಯಕ್ರಮಗಳನ್ನು ತಿಳಿಸಿ.

**ಅಥವಾ**

ಭಾರತ ಮತ್ತು ಚೀನಾ ಬಾಂಧವ್ಯಕ್ಕೆ ಅಡ್ಡಿಯಾಗಿರುವ ಅಂಶಗಳಾವವು?

Use E-Papers, Save Tress
Above line hide when print out

20.ಪೂರ್ವಾಗ್ರಹದಿಂದ ಉಂಟಾಗುವ ಪರಿಣಾಮಗಳಾವವು?

**ಅಥವಾ**

ಕೂಲಿ ರಹಿತ ದುಡಿಮೆಯು ಕೂಲಿ ಸಹಿತ ದುಡಿಮೆಗಿಂತ ಹೇಗೆ ಭಿನ್ನವಾಗಿದೆ. ವಿವರಿಸಿ

21.ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ ಚರ್ಚಿಸಿರಿ.

22.ಸರ್ವಕಾಲಿಕ & ಪ್ರವಾಹ ಕಾಲುವೆಗಳಿಗಿರುವ ವ್ಯತ್ಯಾಸಗಳೇನು?

23. ನೀತಿ ಆಯೋಗದ ಲಕ್ಷಣಗಳನ್ನು ತಿಳಿಸಿ.

24.ಬ್ಯಾಂಕಿನಲ್ಲಿ ತೆರೆಬಹುದಾದ ವಿವಿಧ ಖಾತೆಗಳನ್ನು ಹೆಸರಿಸಿ.

**IV.ಈ ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.** **9x3=27**

25. ಮಾರ್ತಾಂಡ ವರ್ಮನು ಡಚ್ಚರನ್ನು ಹೇಗೆ ನಿಯಂತ್ರಿಸಿದನು?

26. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವವು?

ಅಥವಾ

ಇಂಗ್ಲಿಷರು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಬದಲಾವಣೆಗಳು ಭಾರತಿಯರಲ್ಲಿ ಮಹತ್ತರ ಬದಲಾವಣೆ ತಂದವು. ನಿರೂಪಿಸಿ.

27. ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿಯಲ್ಲಿ ರಾಜಾರಾಂ ಮೋಹನರಾಯರ ಕೊಡುಗೆಗಳೇನು?

28. ಭಾರತ ರಷ್ಯಾ ದೇಶದೊಂದಿಗೆ ಇಂದಿಗೂ ಉತ್ತಮ ಬಾಂಧವ್ಯ ಹೊಂದಿದೆ ಎಂದು ಹೇಗೆ ಹೇಳುವಿರಿ?

29. ಭಾರತದಲ್ಲಿ ಅಸ್ಪೃಶ್ಯತೆ ತೊಡೆದುಹಾಕಲು ಸರ್ಕಾರ ಕೈಗೊಂಡಿರುವ ಕ್ರಮಗಳಾವವು?

30.ಪಶ್ಚಿಮ ಕರಾವಳಿ & ಪೂರ್ವ ಕರಾವಳಿಗಳ ನಡುವಿನ ವ್ಯತ್ಯಾಸ ತಿಳಿಸಿ.

ಅಥವಾ

ಮಣ್ಣಿನ ಸವೆತದಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸಿ.

31.ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳೇನು?

32.ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೇನು?

**ಅಥವಾ**

ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ತಿಳಿಸಿ.

33.ಬ್ಯಾಂಕಿನ ಗುಲಕ್ಷಣಗಳನ್ನು ಪಟ್ಟಿ ಮಾಡಿ

ಅಥವಾ

ಅಂಚೆ ಇಲಾಖೆ ಅನೇಕ ಹಣಕಾಸು ವ್ಯವಹಾರ ಕೈಗೊಂಡಿದೆ.ಈ ಹೇಳಿಕೆಯನ್ನು ಸಮರ್ಥಿಸಿ

**V.ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ** **4x4=16**

34. ಚಿಕ್ಕದೇವರಾಜ ಒಡೆಯರು ಒಬ್ಬ ಸಮರ್ಥ ಆಡಳಿತಗಾರರು ಹಾಗೂ ಕಲೆ ಮತ್ತು ಸಾಹಿತ್ಯ ಅಭಿಮಾನಿಯಾಗಿದ್ದರು ಈ ಹೇಳಿಕೆಯನ್ನು ಸಮರ್ಥಿಸಿ.

**ಅಥವಾ**

ಖಾಯಂ ಜಮಿನ್ದಾರಿ ಪದ್ಧತಿ ರೈತರನ್ನು "ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ ಸಾಲದಲ್ಲೇ ಸಾಯುವಂತೆ ಮಾಡಿತು" ಹೇಗೆ?

35. ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧವನ್ನು ವಿವರಿಸಿ.

36 ಕೋಮುವಾದ ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳೇನು?

37 ಅರಣ್ಯ ಸಂರಕ್ಷಣೆ ಎಂದರೇನು? ಅದರ ವಿಧಾನಗಳನ್ನು ತಿಳಿಸಿ.

**VI ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ** **1+4=5**

1. ಕೆ2 (ಗಾಡ್ವಿನ್ ಆಸ್ಟಿನ್)
2. ಪಶ್ಚಿಮ ಘಟ್ಟಗಳು
3. ಗೋವಿಂದ ಸಾಗರ
4. ಕೋಸಿ ಯೋಜನೆ

***************

Use E-Papers, Save Tress
Above line hide when print out